(ಶ್ರೀ ಬಿ. ವಿ. ಕಕ್ಕಿಲಾಯ)

ಸಂಘದ ಕಾರ್ಯಕರ್ತರು ಹಾಗೂ ಅದರ ಅಧ್ಯಕ್ಷರು ಅವರನ್ನು ಘೇರಾವೋ ಮಾಡಿದರು ಮತ್ತು ಅವರ ಕಾರಿಗೆ ಕಲ್ಲುಗಳನ್ನೂ ಹೊಡೆದರು ಮತ್ತು ಇದೇ ಸಂದರ್ಭದಲ್ಲಿ ಅವರ ರಕ್ಷಣೆಗೆ ಬಂದ ಒಬ್ಬರು ಆರ್‌ಟಿಒ ರವರು ಕಾಲು ಮುರಿದುಕೊಂಡು ಇಂದು ಎಂಟು ತಿಂಗಳುಗಳ ಕಾಲ ಅವರು ಆಸ್ಪತ್ರೆಯಲ್ಲಿರಬೇಕಾಗಿ ಬಂದಿದೆ. ಇಂದು ನಾವು ಕಾಲಿಂಗ್ ಅಟೆನ್‌ಷನ್ ನೋಟೀಸ್ ತಂದಿರುವುದರ ಉದ್ದೇಶ ಇಂದು ಅಖಿಲ ಭಾರತ ಮಟ್ಟದಲ್ಲಿರುವ ಜನಸಂಘದವರು ತಾಳಿರುವ ಧೋರಣೆ ಚುನಾಯಿತರಾದ ಅಸೆಂಬ್ಲಿ ಹಾಗೂ ಪಾರ್ಲಿಮೆಂಟು ಸದಸ್ಯರುಗಳನ್ನು ಘೇರಾವೋ ಮಾಡಿ ಅವರುಗಳು ಅಸೆಂಬ್ಲಿಗೆ ಬಾರದಂತೆ ಮಾಡಲು ಹೊರಟಿರುವ ಒಂದು ಚಳುವಳಿಯ ಆರಂಭ ಇಂದು ದಕ್ಷಿಣ ಜಿಲ್ಲೆಯಲ್ಲಿ ಮೊದಲಾಗಿ ಆರಂಭವಾಗಿದೆ. ಇದು ಇಲ್ಲಿರುವ ಪ್ರಶ್ನೆ. ಇದು ಇಂಟರು ಡಿಫ್ಯಕ್ಟು ಬ್ಯಾನ್ ತೆಗೆಯಬೇಕೆಂದು ಮಾಡಿದ ಚಳುವಳಿಯಲ್ಲ. ಇಂತಹ ಸದಸ್ಯರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪಾಟೀಲ್.—ಜನಸಂಘದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ನಾವು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಜನಸಂಘವೇ ಇರಲಿ, ಇಲ್ಲ ಬೇರೆ ಪಕ್ಷವೇ ಇರಲಿ ಯಾರು ಕಾನೂನು ನಿಯಮಗಳಿಗೆ ವಿರೋಧವಾಗಿ ಹೋಗುತ್ತಾರೋ ಅವರ ಬಗ್ಗೆ ಕಾಯದೆ ಪ್ರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಎರಡನೇದು ಸರ್ಕಾರದ ಮಂತ್ರಿಗಳನ್ನು ಹಾಗೂ ಸದಸ್ಯರುಗಳನ್ನು ಘೇರಾವೋ ಮಾಡುತ್ತಾರೆಂದು ಆಡಕ್ಕೆ ಯಾರೂ ಮಣಿಯುವುದಿಲ್ಲ. ಇಂತಹ ಘೇರಾವೋಗಳಿಗೆ ಮಣಿಯುವಂತಹ ಸರಕಾರವನ್ನು ನಾವು ಮಾಡಲು ಸಾಧ್ಯವೂ ಇಲ್ಲ.

NOTICE OF ADJOURNMENT MOTION

Re : **Railway Strike and Situation arising therefor.**

ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನಾನು ರೈಲ್ವೆಯ ಬಗ್ಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ, ಅದಕ್ಕೆ ತಮ್ಮ ಉತ್ತರವೂ ಬಂದಿದೆ. ಆದರೆ ನಮ್ಮ ರಾಜ್ಯದಲ್ಲಿ ನಿನ್ನೆ ಇದ್ದ ಸ್ಥಿತಿಗೂ ಇಂದು ಇರುವ ಸ್ಥಿತಿಗೂ ಅನೇಕ ಬದಲಾವಣೆಗಳಾಗಿವೆ, ಇದರ ಬಗ್ಗೆ ಸರ್ಕಾರದ ನೀತಿಯೇನು ಎನ್ನುವುದನ್ನು ನಾವಿಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಇದರ ಬಗ್ಗೆ ಹಿಂದೆ ನಿಲುವಳಿ ಸೂಚನೆ ತಂದಾಗ ಸರ್ಕಾರದವರು ಒಂದು ಹೇಳಿಕೆ ಕೊಟ್ಟರು.

ಅಧ್ಯಕ್ಷರು.—ಹೇಳಿಕೆ ಕೊಟ್ಟ ಮೇಲೆ ಮತ್ತೆ ಇದನ್ನು ಹೇಳುವುದು ಬೇಡ.

ಶ್ರೀ ಕೊಣಂದೂರು ಲಿಂಗಪ್ಪ.—ಇಂದು ಒಂದು ರೀತಿಯ ಆತಂಕಿತ ಪರಿಸ್ಥಿತಿ ಉಂಟಾಗಿ ರೈಲ್ವೆ ಗಳೆಲ್ಲಾ ಸ್ತಬ್ಧವಾಗಿವೆ. ಇಂದು ಜನರು ಓಡಾಡಲು ಸಾಧ್ಯವಿಲ್ಲದಂತಾಗಿದೆ. ಇದು ಕೇಂದ್ರಕ್ಕೆ ಸೇರಿದ ವಿಚಾರ ಇರಬಹುದು.

ಸರ್ಕಾರ ತಮ್ಮ ಪೋಲೀಸ್ ಪಡೆಯನ್ನು ಏತಕ್ಕೆ ಉಪಯೋಗ ಮಾಡಬೇಕಿತ್ತು ? ಸರ್ಕಾರ ನಡೆಯತಕ್ಕ ರೀತಿ ಅತ್ಯಂತ ವಿಷಾದಕರವಾದುದು. ಬಹಳ ಖೇದಕರವಾದುದು. ಸರ್ಕಾರಿ ನೌಕರರು ಹಂತಹಂತವಾಗಿ ಬೇಡಿಕೆಗಳನ್ನು ಚರ್ಚೆಮಾಡುವುದಕ್ಕೆ ಸಿದ್ಧವಾಗಿದ್ದರೂ ಕೂಡ ಗುಂಡಿಟ್ಟು ಹೊಡೆಯುವ ಹೇಡಿ ಸರ್ಕಾರದ ಬಗ್ಗೆ ಚೀಮಾರಿ ಹಾಕಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿನ್ನೆವರೆಗೂ ಇದ್ದಂಥ ಪರಿಸ್ಥಿತಿಯನ್ನು ಸಭೆಯಮುಂದೆ ಮಾನ್ಯ ಸದಸ್ಯರು ಕೇಳಿದಾಗ ನಾನು ಹೇಳಿದ್ದೇವೆ. ಇನ್ನೂ ಹೆಚ್ಚು ವಿಷಯ ಬೇಕಾದರೆ ಸಂಗ್ರಹಿಸಿ ನಾಳೆ ಹೇಳಬಹುದಕ್ಕೆ ಸಾಧ್ಯ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ಭಾಗದಿಂದ ಕೇಂದ್ರಕ್ಕೆ ಬರತಕ್ಕ ರೈಲುಗಳು ನಿಂತುಹೋಗಿರುವುದರಿಂದ ಪ್ರಯಾಣಿಕರಿಗೆ ಬೇರೆ ವ್ಯವಸ್ಥೆ ಇಲ್ಲ. ಸರ್ಕಾರಿ ಬಸ್‌ಗಳು ಸಿಗುತ್ತಿಲ್ಲ. ಪ್ರಯಾಣಿಕರು ಯಾವ ಯಾವ ನಗರಗಳಿಗೆ ಹೋಗಿದ್ದಾರೋ ಅಲ್ಲಲ್ಲೇ ನಿಂತಿದ್ದಾರೆ ಅನೇಕ ಕಡೆ ಕಾಗದಪತ್ರಗಳೂ ಸಹ

ಹೋಗುತ್ತಾ ಇಲ್ಲ ಮನೆಯವರಿಗೆ ಎಲ್ಲಿ ಹೋಗಿದ್ದಾರೆ ಎಲ್ಲಿ ನಿಂತಿದ್ದಾರೆ ಎನ್ನುವುದೂ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಹಸ್ರಾರು ಜನಗಳಿಗೆ ಕಳವಳಕ್ಕೆ ಅವಕಾಶವಾಗುವುದಲ್ಲದೆ ಭಯಗ್ರಸ್ಥ ರಾಗಿದ್ದಾರೆ, ನೂರು, ಇನ್ನೂರು ಮೈಲಿಗಳಿಂದ ಬಂದವರು ಇಂತಹ ಕಡೆ ನಿಂತಿದ್ದಾರೆ. ಇಂತಹ ಕಡೆ ಬಂದಿದ್ದಾರೆ ಎನ್ನುವುದನ್ನು ರೇಡಿಯೋ ಮುಖಾಂತರ ಪ್ರಸಾರ ಮಾಡಬೇಕು. ದೂರಪ್ರದೇಶಗಳಲ್ಲಿ ಸಂಚಾರ ಮಾಡುತ್ತಾ ಇರತಕ್ಕ ಜನರು ಯಾರು ಎಲ್ಲಿದ್ದಾರೆ, ಇಂತಹ ಕಡೆ ಬಂದಿದ್ದಾರೆಂದು ಎಂಬುದನ್ನು ರೇಡಿಯೋ ಮುಖಾಂತರ ಪ್ರಸಾರ ಮಾಡಿ ಜನರಿಗೆ ತಿಳಿಸುವ ವ್ಯವಸ್ಥೆ ಮಾಡಬೇಕು,

ಅಧ್ಯಕ್ಷರು.—ನೆನ್ನೆದಿವಸ ಒಪ್ಪಿಕೊಂಡಂತೆ ಇವತ್ತು ಡಿಮ್ಯಾಂಡಿನ ಚರ್ಚೆಗೆ ಉತ್ತರ ಕೊಡಬೇಕು ಮತ್ತು ಇನ್ನೊಂದು ಡಿಮ್ಯಾಂಡ್ ಪಾಸು ಆಗಬೇಕು. ಅವಕ್ಕೋಸ್ಕರ ನಾವು ಒಂದು ಗಂಟೆ ಮುಂಚಿತ ವಾಗಿ ಸೇರಿರುವುದು.

ಶ್ರೀ ಕೋಣಂಡೂರು ಲಿಂಗಪ್ಪ.—ನಾವು ಇಲ್ಲಿ ಕುಳಿತುಕೊಳ್ಳುವ ಹಾಗೆಯೇ ಇಲ್ಲ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನೀತಿಯಿಂದ ಹಾಗೆ ಆಗಿದೆ,

ಶ್ರೀ ಕಾಗೋಡು ತಿಮ್ಮಪ್ಪ.—ಖಾಸಗಿ ಬಸ್ಸಿನವರು ಪರಿಸ್ಥಿತಿಯನ್ನು ದುರುಪಯೋಗಪಡಿಸಿ ಕೊಂಡು ಒಂದಕ್ಕೆ ನಾಲ್ಕರಷ್ಟು ದರ ಜಾಸ್ತಿ ಮಾಡಿದ್ದಾರೆ. ಅದಕ್ಕೆ ತಕ್ಷಣ ಎಲ್ಲಾ ಕಡೆ ಪೋಲೀಸ್ ಸ್ಟೇಷನ್ ಗಳಿಗೆ ವಿಚಾರ ತಿಳಿಸುವುದು ಮಾತ್ರವಲ್ಲದೆ ಮಾಮೂಲಿ ದರಕ್ಕಿಂತ ಹೆಚ್ಚಿಗೆ ವಸೂಲು ಮಾಡಬಾರದೆಂದು ಎಚ್ಚರಿಕೆಯನ್ನು ಕೊಡಬೇಕು. ಇಲ್ಲದೇ ಹೋದರೆ ಇದರಿಂದ ಜನರ ಶೋಷಣೆಗೆ ಅವಕಾಶವಾಗುತ್ತಿದೆ.

ಎಂ. ಎಸ್. ಕೃಷ್ಣನ್.—ರೈಲ್ವೇ ಸ್ಟ್ರೈಕ್ ಮಾಡಿದ್ದಕ್ಕೆ ರಾಜ್ಯ ಸರ್ಕಾರ ಪೋಲೀಸರನ್ನು ಏತಕ್ಕೆ ಉಪಯೋಗಿಸುತ್ತಾರೆ ಎನ್ನುವುದು ಪ್ರಶ್ನೆ ಕಂಬಿ ಕಿತ್ತು ಹಾಕಿದ್ದಾರೆ ಉಪಯೋಗಿಸಬೇಕಾಗುತ್ತದೆ. ಎಂದು ಹೇಳಿದರು ಅದು ಬೇರೆ ಸಮಾಚಾರ. ನಿನ್ನೆದಿವಸ ಮೈಸೂರಿನಲ್ಲಿ ಹೆಣ್ಣು ಮಕ್ಕಳನ್ನು ಹೊಡೆದು ಬಡಿದು ಹಿಂಸೆ ಮಾಡುತ್ತಿದ್ದಾರೆ. ಮನೆಯೊಳಗೆ ನುಗ್ಗಿ ಹೊಡೆದಿದ್ದಾರೆ ನಾಳೆ ಸ್ಟೇಟ್ ಮೆಂಟ್ ಕೊಟ್ಟಾಗ ಪೋಲೀಸರನ್ನು ಜನಗಳ ಮೇಲೆ ಬಿಡುವುದಿಲ್ಲವೆಂದು ಹೇಳಲಿ. ಮತ್ತು ಖಾಸಗಿ ಬಸ್ಸಿನವರು ಸಿಕ್ಕಾಪಟ್ಟೆ ದರಗಳನ್ನು ಏರಿಸಿರುತ್ತಾರೆ ಇದರ ಬಗ್ಗೆ ಹೇಳಬೇಕು,

MADAM SPEAKER.—I with hold may Commeat to the notice and adjournment mot on.

PAPERS LAID ON THE TABLE

SECRETARY.—I Lay on the table the second list of unstarred questions and answers of Fourth Session.

UNSTARRED QUESTIONS AND ANSWERS
GIRLS HIGH SCHOOL BUILDING AT MUDIGERE

(7) SRI PUTTASWAMY (Mudigere).—Will the Minister for Education be pleased to state;—

(*a*) whether it has come to the notice of the Government that the Girls' High School building at Mudigere belongs to the Taluk Development Board, Mudigere.

(*d*) if so, whether the building is sufficient to accommodate all the students with other facilities like lavatory etc.